ಮಂದಹಾಸದಂತಿತ್ತು. ನೋಡನೋಡುತ್ತಿದ್ದಂತೆ ಅದರ ಮೇಲೆ ಅಸ್ತಮಿಸುವ ವಾರೆ ಸೂರ್ಯನ ಹೊಂಗದಿರು ಬಿದ್ದಿತು. ಈಗ ಬಿಳಿಯ ಕೋಡುಗಳಿಗೆ ಚಿನ್ನದ ರೇಖಿನ ರೇಷ್ಮೆ ಪಟಗ ಸುತ್ತಿದಂತಾಯಿತು. ಆಗಸ, ಪರ್ವತ, ಹಿಮ ಮೋಡ – ಗೆರೆಯೆಳೆದು ಗುರುತಿಸಲಾಗದ ಸಮ್ಮೋಹಕ ಮಿಲನ. ಸೂರ್ಯಾಸ್ತದೊಡನೆ, ಸಂಜೆಗತ್ತಲಲ್ಲಿ ಶಿಖರಗಳು ಕಪ್ಪಾಗುತ್ತ ದಿಗಂತದಲ್ಲಿ ಕಣ್ಮರೆಯಾದವು. ನಿಟ್ಟುಸಿರು ಬಿಟ್ಟೆ.

ಅಲ್ಲಿಂದಾಚೆ ಮಾಡಿದ ಚಾರಣ ಮತ್ತು ಪ್ರವಾಸಗಳಲ್ಲಿ ಅನೇಕಾನೇಕ ಹಿಮಪರ್ವತಗಳನ್ನು ನೋಡುವ ಅವಕಾಶ ಸಿಕ್ಕಿತು. ಬದರಿನಾಥ್ ಹಾದಿಯ ಪರ್ವತಗಳ ಗಾತ್ರ–ಕಣಿವೆಯ ಆಳಗಳಂತೂ ರುದ್ರರಮಣೀಯ. ಬಸವಣ್ಣ ಹೇಳುವಂತೆ 'ಆಕಾಶದಿಂದತ್ತತ್ತ ಶ್ರೀಮುಕುಟ, ಪಾತಾಳದಿಂದತ್ತತ್ತ ಶ್ರೀಚರಣ'; ತಲೋಟಿ ಚಾರಣದ ಹಾದಿ, ಆದಿಶೇಷನ ಹೆಡೆಗಳ ಮೇಲೆ ನಡೆಯುತ್ತಿದ್ದೇವೆ ಎಂಬಂತೆ ಪರ್ವತಗಳ ಭುಜಗಳ ಮೇಲೆಯೇ ಇತ್ತು. ನಮ್ಮ ಕುಮಾರಪರ್ವತ ಶ್ರೇಣಿಯಲ್ಲಿರುವ ಶೇಷಪರ್ವತದ ತುದಿಯೂ, ಬಾಬಾಬುಡನಗರಿಯ ಬೆಟ್ಟಗಳೂ ಹೀಗೆಯೇ ತುದಿಯಲ್ಲಿ ತಟ್ಟನೆ ಕಡಿದಾದ ಮೊನಚಾದ ಏಣಿನಿಂದ ಕೂಡಿವೆ. ಮತ್ತೂ ಮುಂದೆ ಆಸ್ಟ್ರಿಯಾ, ಭೂತಾನ್, ನೇಪಾಳ, ಇರಾನ್‌ಗಳಲ್ಲಿ ಹಿಮಾಚ್ಛಾದಿತ ಪರ್ವತಗಳನ್ನು ನೋಡಿದೆ. ಆದರೂ ಮೊದಲ ಪ್ರೇಮದ ನೋಟಕ್ಕಿರುವ ಮಾಧುರ್ಯದಂತೆ, 'ಕಣ್ಗೆನೋಟವು ಇಳಿವ ಮುನ್ನವೇ ಎದೆಗೆ ಪ್ರೇಮವು ಹರಿ'ಯುವಂತೆ, ಧರ್ಮಶಾಲೆಯ ಧವಳಾಧರ್ ಹಿಮಶಿಖರಗಳ ರೋಮಾಂಚನವು ಚಿತ್ತಭಿತ್ತಿಯಲ್ಲಿ ಬಿಡಿಸಿದ ಚಿತ್ರದಂತೆ ಉಳಿದುಬಿಟ್ಟಿದೆ. ಧವಳ ಎಂದರೆ ಬಿಳಿ. ಬೆಳ್ಳನೆ ಬೆಳಕಿನ ಪೂರ್ಣಿಮೆಗಳು ಬುದ್ಧನ ಹುಟ್ಟು ಮತ್ತು ಮರಣದಲ್ಲಿ ಮಹತ್ವದ ಪಾತ್ರವಹಿಸಿವೆ. ಧರ್ಮಶಾಲೆಯ ವಿಹಾರದಲ್ಲಿ ನಮಗೆ ಭಿಕ್ಕುಗಳು ಹೊದಿಸಿದ ರೇಷ್ಮೆವಸ್ತ್ರವೂ ಬಿಳುಪಾಗಿತ್ತು.

ಪರ್ವತಗಳನ್ನು ಯಾವ ಹೊತ್ತಲ್ಲಿ ನೋಡುತ್ತೇವೆ ಎನ್ನುವುದರಿಂದ ಸಿಗುವ ಅನುಭವ ಬೇರೆಯಾಗುತ್ತದೆಯೇ? ಕೇದಾರಕಾಂಟ ಚಾರಣದಲ್ಲಿ ನಮ್ಮ ಬೇಸ್‌ಕ್ಯಾಂಪು ಉತ್ತರಕಾಶಿ ಜಿಲ್ಲೆಯ ಸಾಂಕ್ರಿ ಎಂಬಲ್ಲಿತ್ತು. ಅದು ಆಗಸಕ್ಕೆ ಕಟ್ಟಿದ ಗೋಡೆಯಂತೆ ಎದ್ದ ಪರ್ವತದ ಜಾರುಮಗ್ಗುಲಿನ ನೇರ ಕೆಳಗೆ ಹರಿವ ಹೊಳೆದಡದಲ್ಲಿತ್ತು. ಚಂದ್ರಖಾನಿ ಚಾರಣದಲ್ಲಿ ಬೇಸ್‌ಕ್ಯಾಂಪು, ಕುಲುವಿನ ಪರ್ವತವೊಂದರ ಅಡಿಯಲ್ಲಿತ್ತು. ಎರಡೂ ಕಡೆ ಮುಂಜಾನೆ ಡೇರೆಯಿಂದ ಹೊರಬಂದು ಕಣ್‌ಬಿಟ್ಟರೆ ಕಾಣುತ್ತಿದ್ದುದು ಬಾನೂ ಅಲ್ಲ, ಭುವಿಯೂ ಅಲ್ಲ. ಎದೆಗೆ ಒದ್ದಂತೆ ಸೆಟೆದು ನಿಂತ ಪರ್ವತಗಳು. ರಾತ್ರಿಯಾದೊಡನೆ ಅವು ಕಣ್ಣುತಳೆದಂತೆ ಚಿರತೆಯೊಂದು ದುರುಗುಟ್ಟಿ ನೋಡುತ್ತಿರುವಂತೆ ಅವುಗಳ ಮೇಲಿದ್ದ ಊರದೀಪಗಳು ಹೊಳೆಯುತ್ತಿದ್ದವು.

ಕೆಲವು ಪರ್ವತದ ಶಿಖರಗಳು ಮಧ್ಯಾಹ್ನದ ಹೊತ್ತು ಮೋಡಗಳಲ್ಲಿ ಒಂದಾಗಿ ಏನೂ



ಕಣಿವೆಯೊಳಗೆ ಹರಿವ ಹಿಮನದಿ